KAMD720014782024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ**

**ಸಿ.ಸಿ.ಸಂ. 848/2024**

**ದಿಃ 28.04.2026**

ಪಿರ್ಯಾದುದಾರರುಃ- ಜಯಮ್ಮ ಕೋಂ ರಾಮಣ್ಣ
ವಯಸ್ಸು 60 ವರ್ಷ,
ವಾಸಃ ಕೊಡಿಯಾಲ ಗ್ರಾಮ, ಅರಕೆರೆ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು

-ವಿರುದ್ದ-

ಆರೋಪಿಃ- ಎ.ವೆಂಕಟೇಶ್ ಬಿನ್ ಅಚ್ಯುತಯ್ಯ,
ವಯಸ್ಸು 45 ವರ್ಷ,
ವಾಸಃ ಕೊಡಿಯಾಲ ಗ್ರಾಮ, ಅರಕೆರೆ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು

**-ಃ ಆಪಾದನೆ ಃ-**

ಶ್ರೀ. ಉಮೇಶ.ಎಂ.ಪಿ,. ಬಿ.ಎ.ಎಲ್., ಎಲ್‌ಎಲ್‌ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಶ್ರೀರಂಗಪಟ್ಟಣ ಆದ ನಾನು ಮೇಲೆ ಹೇಳಿದ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆಪಾಧಿಸುವುದೇನೆಂದರೆ,

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ನೀವು ಪಿರ್ಯಾದುದಾರರಿಂದ ನಿಮ್ಮ ದರದು ನಿಮಿತ್ತ ಅಂದರೆ ಕಾನೂನುಬದ್ದ ಅವಶ್ಯಕತೆಗಳಿಗಾಗಿ ಅಕ್ಟೋಬರ್ 2023 ರಲ್ಲಿ ರೂ.1,50,000/-(ಒಂದು ಲಕ್ಷ ಐವತ್ತು ರೂಪಾಯಿಗಳು) ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲದ ಹಣವನ್ನು ಮರುಪಾವತಿಗಾಗಿ ಹೇಳಿದ್ದು, ಪಾವತಿಸದ ಕಾರಣ ಪಿರ್ಯಾದುದಾರರು ನಿಮ್ಮನ್ನು ಸಾಲದ ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಖಾತೆಯುಳ್ಳ ಭಾರತೀಯ ಸ್ಟೇಟ್ ಬ್ಯಾಂಕ್, ಶ್ರೀರಂಗಪಟ್ಟಣ ಶಾಖೆಗೆ ಸೇರಿದ ಚೆಕ್ ಸಂಃ 747226 ದಿನಾಂಕಃ 05.02.2024 ಎಂದು ನಮೂದಿಸಿ ರೂ.1,50,000 /- ಮೊತ್ತ ನಮೂದು ಮಾಡಿ ಚೆಕ್ಕನ್ನು ನೀಡಿ, ಸದರಿ ಚೆಕ್ಕನ್ನು ಬ್ಯಾಂಕಿಗೆ ನಗಧೀಕರಣಗೊಳಿಸಲು ತಿಳಿಸಿದ್ದು, ಅದರಂತೆ ಸದರಿ ಚೆಕ್ಕನ್ನು ಪಿರ್ಯಾದುದಾರರು

KAMD720014782024

ಅವರು ಖಾತೆ ಹೊಂದಿರುವ ಭಾರತೀಯ ಸ್ಟೇಟ್ ಬ್ಯಾಂಕ್, ಕೊಡಿಯಾಲ ಶಾಖೆಯ ಮೂಲಕ ನಗದೀಕರಿಸಲು ಪಿರ್ಯಾದಿ ದಿನಾಂಕಃ 05.02.2024 ರಂದು ಹಾಜರುಪಡಿಸಿದಾಗ, ಸದರಿ ಬ್ಯಾಂಕಿನವರು "ಸಾಕಷ್ಟು ಹಣವಿಲ್ಲ" (Funds Insufficient) ಎಂಬ ಹಿಂಬರಹದೊಂದಿಗೆ ಪಿರ್ಯಾದುದಾರರಿಗೆ ಚೆಕ್ ಅನ್ನು ವಾಪಸ್ ನೀಡಿರುತ್ತಾರೆ.

**2.** ನೀವು ಪಿರ್ಯಾದುದಾರರಿಗೆ ನೀಡಿದ ಚೆಕ್ಕು ನಗದೀಕರಣವಾಗದೇ ಇದ್ದುದ್ದರಿಂದ ಪಿರ್ಯಾದುದಾರರು ನಿಮ್ಮನ್ನು ಭೇಟಿ ಮಾಡಿ ಚೆಕ್ ನಗಧಿಕರಣವಾಗದೆ ಇರುವ ಬಗ್ಗೆ ತಿಳಿದ್ದು ನಂತರ, ಪಿರ್ಯಾದುದಾರರು ಅವರ ವಕೀಲರ ಮೂಲಕ ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ದಿನಾಂಕಃ 08.02.2024 ರಂದು ನಿಮ್ಮ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ನೋಟೀಸು ನೀಡಿರುತ್ತಾರೆ. ಸದರಿ ನೋಟೀಸು ದಿನಾಂಕ 15.02.2024 ರಂದು ನಿಮಗೆ ಖುದ್ದು ಜಾರಿಯಾಗಿರುತ್ತದೆ. ಅದರೂ ಸಹ ನೀವು ಚೆಕ್ಕನ ಬಾಬ್ತು ಹಣವನ್ನಾಗಲಿ ಪಾವತಿ ಮಾಡಿರುದಿಲ್ಲ. ನೀವು ಈ ರೀತಿ ಮಾಡಿರುವುದು **ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ 138** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆ: 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?

**ಉತ್ತರಃ**

ಪ್ರಶ್ನೆ: 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ದ ವಿಚಾರಣೆ ನಡೆಯಬೇಕೆ?

**ಉತ್ತರಃ**

KAMD720014782024

ಪ್ರಶ್ನೆ: **3** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 747226 ನಿಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತಾ ನಂ. 30070759165 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

ಉತ್ತರ:

ಪ್ರಶ್ನೆ: **4** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 747226 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

ಉತ್ತರ:

ಪ್ರಶ್ನೆ: **5** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 747226 ನ್ನು ಪಿರ್ಯಾದುದಾರರಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?

ಉತ್ತರ:

ಪ್ರಶ್ನೆ: **6** ಪಿರ್ಯಾದುದಾರರಿಂದ ದಿನಾಂಕ 19.12.2024 ರಂದು ರೂ.4,00,000/- ರೂ.ಗಳನ್ನು ಪಡೆದುಕೊಂಡಿರುವಿರಾ?

**ಉತ್ತರ:**

ಪ್ರಶ್ನೆ: **7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 747226 ದಿನಾಂಕ 05.02.2024 ರಲ್ಲಿ ನಮೂದಿಸಿದ ರೂ.1,50,000/- ನ್ನು (ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಪಿರ್ಯಾದುದಾರರಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

ಉತ್ತರ:

ಪ್ರಶ್ನೆ: **8** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

ಉತ್ತರ:

KAMD720014782024

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **28.04-2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

ಪ್ರದನ್ಯಾ. ದಂಡಾಧಿಕಾರಿಗಳು
ಶ್ರೀರಂಗಪಟ್ಟಣ.

ಆರೋಪಿ ಸಹಿಃ